# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಮಾಲತಿ ಕೆ. ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ ಪಂಚಾಯಿತಿ, ಬೆಳ್ತಂಗಡಿ ಇವರ ವೈದ್ಯಕೀಯ ವೆಚ್ಚ ಮರುಪಾವತಿ ಬಗ್ಗೆ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಇವರ ಪತ್ರ ಸಂಖ್ಯೆ: ದಕಜಿಪ/ ಆಡಳಿತ/ವೈದ್ಯಕೀಯ/ಸಿಆರ್-10/2011-12 ದಿನಾಂಕ: 29-08-2011.

3. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಎಂಡಿಎ(4)/449/20112-12 ದಿನಾಂಕ: 03-11-2011.

2. ಸರ್ಕಾರದ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2012. ದಿನಾಂಕ: 20-01-2012ರ

----

**ಪ್ರಸ್ತಾವನೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಇವರು ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ಪತ್ರದಲ್ಲಿ, ಶ್ರೀಮತಿ ಮಾಲತಿ ಕೆ. ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ ಪಂಚಾಯಿತಿ, ಬೆಳ್ತಂಗಡಿ ಇವರ ಮಗ ಶ್ರೀ ಆರ್.ಜೆ.ನಾಗೇಂದ್ರ ವಾಗ್ಲೆ ರವರು ರೆಕ್ಟಲ್ ಪ್ರೊಲ್ಯಾಕ್ಸ್ ಕಾಯಿಲೆಯಿಂದ ಬಳಲುತ್ತಿದ್ದು ಕೆ.ಎಂ.ಸಿ. ಮಂಗಳೂರು ಆಸ್ಪತ್ರೆಯಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದುಕೊಂಡಿದ್ದು, ಚಿಕಿತ್ಸೆಗೆ ತಗಲಿರುವ ವೆಚ್ಚ ಒಟ್ಟು ರೂ. 75,640-00 ಗಳನ್ನು ಮರುಪಾವತಿಸಲು ಸರ್ಕಾರದ ಅನುಮೋದನೆ ನೀಡಲು ಕೋರಿರುತ್ತಾರೆ. ಸದರಿ ಪ್ರಸ್ತಾವನೆಗೆ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬಕಲ್ಯಾಣ ಸೇವೆಗಳು, ಬೆಂಗಳೂರು ಇವರ ದಿನಾಂಕ: 3-11-2011ರ ಪತ್ರದಲ್ಲಿ ರೂ. 24,000-00ರ (ರೂಪಾಯಿ ಇಪ್ಪತ್ನಾಲ್ಕು ಸಾವಿರ ಮಾತ್ರ) ಮೊತ್ತಕ್ಕೆ ವಿಶೇಷ ಮಂಜೂರಾತಿ ಪಡೆದು ನಂತರ ವೈದ್ಯಕೀಯ ವೆಚ್ಚ ಮರುಪಾವತಿಸಬಹುದು ಎಂದು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀಮತಿ ಮಾಲತಿ ಕೆ. ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ ಪಂಚಾಯಿತಿ, ಬೆಳ್ತಂಗಡಿ ಇವರ ಮಗ ಸರ್ಕಾರದಿಂದ ಮಾನ್ಯತೆ ಪಡೆದಿಲ್ಲದ ಕೆ.ಎಂ.ಸಿ. ಮಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದಿದ್ದು, ಚಿಕಿತ್ಸೆ ವೆಚ್ಚ ರೂ. 24,000-00 ಗಳ ಮೊತ್ತವಾಗಿರುವುದರಿಂದ ವೈದ್ಯಕೀಯ ವೆಚ್ಚದ ಮರುಪಾವತಿ ನಿಯಮಾವಳಿಗಳಲ್ಲಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿರುವುದನ್ನು ಖಚಿತಪಡಿಸಿಕೊಂಡು ಶ್ರೀಮತಿ ಮಾಲತಿ ಕೆ. ಸಹಾಯಕ ಲೆಕ್ಕಾಧಿಕಾರಿ ರವರು ಭರಿಸಿರುವ ವೈದ್ಯಕೀಯ ವೆಚ್ಚವನ್ನು ಅರ್ಹತೆ ಆಧರಿಸಿ ಮರುಪಾವತಿಸಲು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ-31 ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ-14ನ್ನು ಸಡಿಲಿಸಿ ಮಂಜೂರಾತಿ ನೀಡಲು ಸರ್ಕಾರವು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ ಸಂಖ್ಯೆ: ಗ್ರಾಅಪ 87 ಪರವ 2011, ಬೆಂಗಳೂರು, ದಿನಾಂಕ:15-01-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಶ್ರೀಮತಿ ಮಾಲತಿ ಕೆ. ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ ಪಂಚಾಯಿತಿ, ಬೆಳ್ತಂಗಡಿ ಇವರ ಮಗನಾದ ಶ್ರೀ ಆರ್.ಜೆ.ನಾಗೇಂದ್ರ ವಾಗ್ಲೆ ರವರಿಗೆ ಕೆ.ಎಂ.ಸಿ. ಮಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ವೈದ್ಯಕೀಯ ಚಿಕಿತ್ಸೆ ವೆಚ್ಚ ರೂ. 24,000-00 ಗಳ (ಇಪ್ಪತ್ನಾಲ್ಕು ಸಾವಿರ ರೂಪಾಯಿಗಳು

→

ಮಾತ್ರ) ಮೊತ್ತವಾಗಿದ್ದು ಸದರಿ ಚಿಕಿತ್ಸೆ ವೆಚ್ಚವನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ನಿಯಮ-31ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ-14ನ್ನು ಸಡಿಲಿಸಿ ಮರುಪಾವತಿಸಲು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2012 ದಿನಾಂಕ: 20-01-2012ರಲ್ಲಿ ನಿಗದಿಪಡಿಸಲಾಗಿರುವ 1 ರಿಂದ 6ರ ಷರತ್ತುಗಳನ್ನು ಪೂರೈಸುವ ನಿಬಂಧನೆಯೊಂದಿಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಬಿ.ರಘುನಾಥ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ / ಅಪರ ಕಾರ್ಯದರ್ಶಿ(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತರ ಸಹಾಯಕರು.
4. ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ದಕ್ಷಿಣ ಕನ್ನಡ, ಮಂಗಳೂರು.
5. ಶ್ರೀಮತಿ ಮಾಲತಿ ಕೆ. ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ ಪಂಚಾಯಿತಿ, ಬೆಳ್ತಂಗಡಿ.
6. ಮೇಲ್ವಿಚಾರಕರು, ಗಣಕ ಕೋಶ, ಗ್ರಾ.ಅ. & ಪಂ.ರಾಜ್ ಇಲಾಖೆ.
7. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.

Sbp/-